ಸಿಓಡಿ ತನಿಖೆಗೆ ಒಳಪಡಿಸಬೇಕು. ತಕ್ಷಣ ಗೃಹಮಂಡಳಿಯ ಮಾಜಿ ಅಧ್ಯಕ್ಷರಾದ ಕಾಗೋಡುತಿಮ್ಮಪ್ಪನವರನ್ನು ಬಂಧಿಸಬೇಕು ಇದು ನನ್ನ ಬೇಡಿಕೆಯಿದೆ.

ಶ್ರೀ ಕಾಗೋಡುತಿಮ್ಮಪ್ಪ :- ಅರಣ್ಯ ಲೂಟಿಯ ಬಗ್ಗೆ ತನಿಖೆ ಮಾಡಿಸಿ, ಇವರದು ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಕಾಗೋಡುತಿಮ್ಮಪ್ಪನವರು ಶಿವಮೊಗ್ಗ ಜಿಲ್ಲೆಯಲ್ಲಿ ಏನು ಅರಣ್ಯ ಲೂಟಿ ಮಾಡಿಸಿದ್ದಾರೆ ಅದರಬಗ್ಗೆ ತನಿಖೆ ಮಾಡಿಸಿ.

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರೇ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಅವರು ಮಂತ್ರಿಗಳಾಗಿದ್ದಾಗ ಅರಣ್ಯ ಲೂಟಿ ಮಾಡಿಸಿರುವ ಬಗ್ಗೆ ತನಿಖೆ ಮಾಡಿಸಬೇಕಾಗುತ್ತದೆ. ಅವರು ಗೃಹಮಂಡಳಿಯ ಅಧ್ಯಕ್ಷರಾಗಿದ್ದಾಗ ಮುಖ್ಯಮಂತ್ರಿಗಳಂತೆ ವರ್ತನೆ ಮಾಡುತ್ತಿದ್ದರು. ಎಲ್ಲ ವ್ಯವಹಾರದಲ್ಲೂ ಪಾಲ್ಗೊಂಡಿದ್ದರು. ಇವತ್ತು ಬಂಗಾರಪ್ಪನವರನ್ನು ಅಡ್ಡದಾರಿಗೆ ಹಿಡಿಸುವುದಕ್ಕೆ ಇವರೇ ಮೂಲ ಕಾರಣ. ಈಗ ಅವರನ್ನು ಬಿಟ್ಟರು ನಿಮ್ಮನ್ನು ಅಪ್ಪಿಕೊಳ್ಳುತ್ತಿದ್ದಾರೆ. ನಾಳೆ ನಿಮ್ಮ ಗತಿ ಏನಾಗುತ್ತದೆ? ನೀವು ಯಾವುದೇ ಗತಿ ಆಗುವುದು ಬೇಡ. ನೀವು ಮುಖ್ಯಮಂತ್ರಿಗಳಾಗಿ ಮುಂದುವರಿಯಬೇಕು. ಅವರು ಶಾಸಕರಾದ ಮೇಲೆ ಮತ್ತು ಗೃಹಮಂಡಲಿಯ ಅಧ್ಯಕ್ಷರಾದ ಮೇಲೆ ಏನೇನು ಅವ್ಯವಹಾರಗಳು ನಡೆದಿವೆ ಎಂಟೈರ್ ಅವ್ಯವಹಾರಗಳನ್ನು ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಇವತ್ತಿನವರೆಗೆ ನೂರಾರು ಕೋಟಿ ರೂಪಾಯಿ ವ್ಯವಹಾರ ನಡೆದಿದೆ. ನನ್ನ ಹತ್ತಿರ ದಾಖಲೆಗಳು ಇವೆ ಅವುಗಳನ್ನು ನಿಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಬೆಳಿಗ್ಗೆ ನಾವೊಂದು ವಿಚಾರ ಪ್ರಸ್ತಾಪ ಮಾಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ನೀವು ಸದನಕ್ಕೆ ಬರುವುದಿಲ್ಲ. ಕೌನ್ಸಿಲ್‌ನಲ್ಲಿದ್ದೆ ಎಂದು ಹೇಳುತ್ತೀರಿ. ಮಂತ್ರಿಗಳು ಇರುವುದಿಲ್ಲ ನೀವು ಇರುವುದಿಲ್ಲ.

Sri M. Veerappa Moily :- I am very sorry. Yor can check up with records. ನಾನು ಕೌನ್ಸಿಲ್‌ನಲ್ಲಿದ್ದೆ. Let records be straight.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಚೆಕ್ ಅಪ್ ಮಾಡತಕ್ಕದ್ದಲ್ಲ.

ಶ್ರೀ ವಾಟಾಳ್ ನಾಗರಾಜ್ :- ಇತ್ತೀಚಿನ ದಿನಗಳಲ್ಲಿ ಈ ಸದನದ ಬಗ್ಗೆ ನಿಮಗೆ ಅಷ್ಟು ಕಾಳಜಿ ಇಲ್ಲ. ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದಾರೆ. ನಾನು ಪ್ರಸ್ತಾಪ ಮಾಡಬೇಕಾಗಿತ್ತು. ನಂಜುಂಡ ಲಾಕಪ್ ಸಾವಿನ ಬಗ್ಗೆ ಬೆಳಕು ಚೆಲ್ಲಬೇಕಾಗಿದೆ. ಒಬ್ಬ ಪೊಲೀಸ್ ಮ್ಯಾಜಿಸ್ಟ್ರೇಟರ್ ಮುಂದೆ ಹೇಳಿಕೆ ಕೊಟ್ಟಿದ್ದಾನೆ.

(2) ನಂಜುಂಡನ ಲಾಕ್ ಅಫ್ ಸಾವಿನ ಬಗ್ಗೆ

ಶ್ರೀ ಪಿ. ಜಿ. ಆರ್. ಸಿಂಧ್ಯ :- ನಮಗೆಲ್ಲರಿಗೂ ಅಧ್ಯಕ್ಷರು ಪರವಾನಗಿಯನ್ನು ಕೊಟ್ಟಿದ್ದಾರೆ ನಾವು ಮಾತನಾಡಿದ್ದೇವೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ್ ಮುಂದೆ ಹೋಗಿ ಸ್ಟೇಟ್‌ಮೆಂಟ್ ಮಾಡಿದ್ದಾನೆ. ನಾನು ಡ್ಯೂಟಿ ರಿಪೋರ್ಟ್ ಮಾಡಿಕೊಂಡಾಗ ಯಾರೂ ಅರೆಸ್ಟ್ ಆದದ್ದು ರಿಕಾರ್ಡ್‌ನಲ್ಲಿ ಇರಲಿಲ್ಲ. ಎಎಸ್‌ಐ ನನಗೆ ಸ್ವತಃ ಹೇಳಿದರು ಯಾರದೂ ಅರಸ್ಟ್ ಆಗಿಲ್ಲವೆಂದು ಆಮೇಲೆ ನೋಡಿದೆ ಒಂದು ಹೆಣದ ಹಾಗೆ ಇತ್ತು. ಅದನ್ನು ಆಟೋರಿಕ್ಷಾದಲ್ಲಿ ತೆಗೆದುಕೊಂಡು ಹೋಗಿ ಕೆಸಿಜಿ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ಮಾಡಿಸಿದೆವು. ಮತ್ತೆ ಅದನ್ನು ತೆಗೆದುಕೊಂಡು ಬಂದೆವು. ನನಗೆ ಮೇಲ್ಪಟ್ಟ ಅಧಿಕಾರಿಗಳ ಐಪಿಎಸ್ ಅಧಿಕಾರಿಗಳಿಂದ ತೊಂದರೆ ಇರುವುದರಿಂದ ನಾನು ನಿಮ್ಮ ಮುಂದೆ ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಹಾಗೆಂದು ಹೇಳಿ ಬೆಳಿಗ್ಗೆ 8-15 ಗಂಟೆಗೆ ಮ್ಯಾಜಿಸ್ಟ್ರೇಟರ್ ಮುಂದೆ ಸ್ಟೇಟ್‌ಮೆಂಟ್

ಮಾಡಿದ್ದಾನೆ. ಅದನ್ನು ರಿಕಾರ್ಡ್ ಮಾಡಿಕೊಂಡಿದ್ದಾರೆ. ಅದನ್ನು ಹೇಳಲಿಲ್ಲ ನಿಮ್ಮ ಅಧಿಕಾರಿಗಳು. ಅದನ್ನು ನಿಮ್ಮ ಗಮನಕ್ಕೆ ಅಧಿಕಾರಿಗಳು ತರಬೇಕಾಗಿತ್ತು. ಮ್ಯಾಜಿಸ್ಟ್ರೇಟರ್ ಮುಂದೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಹೇಳಿರತಕ್ಕದ್ದು. ತಾವು ಅದನ್ನು ಏಕೆ ಸದನಕ್ಕೆ ಹೇಳಲಿಲ್ಲ ಸ್ವಾಮಿ ? ಇದಕ್ಕೆ ಕಾರಣವೇನು? ಅವರು ಏನು ಮಾಡಿದ್ದಾರೆಂದರೆ ಇನ್ನೊಂದು ಕತೆ ಹೇಳುತ್ತಿದ್ದಾರೆ. ಆ ಪೋಲೀಸ್ ಕಾನ್‌ಸ್ಟೇಬಲ್‌ಗೆ ತಲೆ ಕಟ್ಟಿದೆ ಅವನ ಪ್ರಿವಿಯಸ್ ರಿಕಾರ್ಡ್ ಹಾಗೆ ಇದೆ, ಹೀಗೆ ಇದೆ ಎಂದು ಪಿಸಿಯ ಮೇಲೆ ಕತೆ ಕಟ್ಟಿದ್ದಾರೆ. ಅವನು ಹೇಳಿದ್ದು ಮ್ಯಾಜಿಸ್ಟ್ರೇಟರ್ ಮುಂದೆ ಅದು ರೆಕಾರ್ಡ್ ಆಗಿದೆ. ಯಾರನ್ನು ನಾವು ನಂಬುವುದು ? ನೀವು ಏನು ಹೇಳಿದ್ದೀರಿ ? ನನ್ನಲ್ಲಿ ವಿಶ್ವಾಸವಿಡಿ ನಾನು ಮುಖ್ಯ ಮಂತ್ರಿ ಇದ್ದೇನೆ ನನ್ನ ಮೇಲೆ ನಿಮಗೆ ವಿಶ್ವಾಸವಿಲ್ಲವೆ ಎಂದು ಹೇಳಿದ್ದೀರಿ. ನಿಮ್ಮ ಬಗ್ಗೆ ಪುನಃ ಹೇಳಬೇಕಾಗುತ್ತದೆ. ವಿರೋಧಪಕ್ಷದಲ್ಲಿ ಇದ್ದುಕೊಂಡು ನಾವೇನು ಮಾಡಬೇಕು ? ಇದನ್ನು ಕೊಶ್ಚನ್ ಮಾಡುವುದಕ್ಕಾಗುತ್ತದೆಯೆ ? ಇವತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಮುಖಪುಟದಲ್ಲಿ ಈ ರೀತಿ ಹೇಳಿದ್ದಾರೆಂದು ಬಂದಿದೆ. ಈ ಎಂಟರ್‌ಕ್ರೈಮ್ ಬಗ್ಗೆ ವಿಟ್‌ನೆಸ್ ಮಾಡಿದಂಥ ಗೋಪಾಲಕೃಷ್ಣ, ಶೇಷಾದ್ರಿಪುರಂರವರನ್ನು ನನ್ನ ಹತ್ತಿರ ನನ್ನ ಮನೆಗೆ ರಾತ್ರಿ ಕರೆದುಕೊಂಡು ಬಂದಿದ್ದರು. ನಾನು ಹೇಳುವುದಕ್ಕೆ ತಯಾರಾಗಿಲ್ಲ. ನಾನು ಡಿಜಿಪಿಯವರಿಗಾಗಲೀ ಹೋಮ್ ಸೆಕ್ರೆಟರಿಯವರಿಗೆ ಹೇಳ ಬಹುದಾಗಿತ್ತು. ಅವರು ನನಗೆ ಪರಿಚಯದವರು. ನಾನು ಹೇಳುವುದಕ್ಕೆ ಹೋಗಲಿಲ್ಲ. ಏತಕ್ಕೆ ಹೋಗಲಿಲ್ಲ ? ಎಂದರೆ ನಮಗೆ ನಿಮ್ಮ ಮೇಲೆ ವಿಶ್ವಾಸವಿದೆ, ನೀವು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದೀರಿ . ನಿನ್ನೆ ಸ್ಟೇಟ್‌ಮೆಂಟ್ ಕೊಟ್ಟೀರಾ ? ಆ ಕ್ರೈಮ್‌ನ್ನು ನೋಡಿರತಕ್ಕವರು ನನ್ನ ಹತ್ತಿರ ಬಂದಿದ್ದರು. ಜವಾಬ್ದಾರಿ ಸ್ಥಾನದಲ್ಲಿದ್ದ ನಾನು ಮಾತನಾಡುತ್ತಿದ್ದೇನೆ. ನೀವು ಅವರನ್ನು ವೆರಿಫೈ ಮಾಡಬಹುದು. ನೀವು ಲಾಕಪ್ ಡಿಸ್ಕ್ರಿಷನ್ ಬಗ್ಗೆ ಕೊಟ್ಟೀರಿ. ಅದು ಆಗಲಿಕ್ಕೆ ಸಾಧ್ಯವಿಲ್ಲ. ಸಿಂಧ್ಯಾರವರೆ, ನಾಗರಾಜರವರೇ, ದೇಶಪಾಂಡೆಯವರೆ ನಮ್ಮ ಮೇಲೆ ವಿಶ್ವಾಸವಿಡಿಯೆಂದು ಹೇಳಿದಿರಿ. ನಾವು ವಿಶ್ವಾಸ ಇಟ್ಟಿದ್ದೇವೆ. ಹೊರಗಡೆ ನಿಮ್ಮ ಬಗ್ಗೆ ಬೈದಿರತಕ್ಕದ್ದು ನೋಡಿದರೆ ನಿಮಗೆ ಏತಕ್ಕೆ ಹೀಗೆ ಆಗಿದೆ ಏನ್ನುವುದು ನಮಗೆ ಅರ್ಥವಾಗುತ್ತಿಲ್ಲ. ನೀವು ಈ ರೀತಿ ಮಾತನಾಡಿದರೆ ನಾವು ಅದೇ ಭಾಷೆಯನ್ನು ಬಳಸಬೇಕಾಗುತ್ತದೆ. ವಿರೋಧಪಕ್ಷದವರಿಗೆ ನಿಮ್ಮ ಭಾಷೆ ಬರುವುದಿಲ್ಲವೆಂದು ತಿಳಿದುಕೊಳ್ಳಬೇಡಿ.

ಶ್ರೀ ಎ. ಕೆ. ಆನಂತಕೃಷ್ಣ :- ಅಧ್ಯಕ್ಷರೇ, The people are at the receiving end..... ಅನ್ನುವುದನ್ನು ಅಂದುಬಿಟ್ಟು ಹೊರಗೆ ಹೋದರೆ ಜವಾಬ್ದಾರಿ ನಮ್ಮದು ಆಗುತ್ತದೆಯೇ ?

ಶ್ರೀ ಪಿ.ಜಿ.ಆರ್ ಸಿಂಧ್ಯ :- ನಿಮಗೆ ವಯಸ್ಸಾಗಿದೆ ಅಷ್ಟೇ. ಮುಖ್ಯ ಮಂತ್ರಿಗಳಲ್ಲಿ ನಾನು ಕೇಳುತ್ತೇನೆ. ನಿಮಗೆ ಯಾವ ಭಾಷೆ ಬಳಸಬೇಕು ? ನಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರತಕ್ಕ ಜನ. ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಚುನಾವಣೆಗಳನ್ನು ಮಾಡಿಲ್ಲವೇ ? ನೀವು ದೊಡ್ಡ ಆದರ್ಶವಾದಿಗಳು. ಇಡೀ ರಾಷ್ಟ್ರದಲ್ಲಿ ತಾವು ಈ ವಿಕೇಂದ್ರಿಕರಣದ ಬಗ್ಗೆ ಮಾರ್ಗದರ್ಶನ ಮಾಡುವುದಕ್ಕೆ ಹೋಗಿದ್ದೀರಿ. ನಾವೆಲ್ಲ ಅದಕ್ಕೆ ವಿರೋಧಿಗಳು, ಸ್ವಾಮಿ. ತಾವು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ನಾವೇನು ಹೇಳಬೇಕು? ನನ್ನ ಬಗ್ಗೆ ವಿಶ್ವಾಸವಿಡಿಯೆಂದು ಹೇಳಿದಿರಿ. ನಿಮ್ಮ ಬಗ್ಗೆ ಇನ್ನೂ ವಿಶ್ವಾಸವಿದೆ. ಅದು ಏನು ಹೇಳುತ್ತೀರೋ ಹೇಳಿ. ನಾನು ಒತ್ತಾಯ ಮಾಡಿದ್ದೇನೆ ಈ ಅಧಿಕಾರಿಗಳಿಂದ ಇದು ಆಗುವುದಿಲ್ಲ. ಸಿಬಿಐನವರಿಂದ ತನಿಖೆಯಾಗಬೇಕು. ಕೆಲವು ಅಧಿಕಾರಿಗಳು ಹೋಗಿ ಇದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಮೇಲೆ ಎಲ್ಲಿ ಬರುತ್ತದೆಯೋ ಎಂದು ಹೇಳಿ ನಾವು ನಿರ್ಭೀತಿಯಿಂದ ಮಾತನಾಡುತ್ತಿದ್ದೇವೆ. ಈ ಅಧಿಕಾರಿಗಳು ನಮಗೆ ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಹೆದರಿ ಕೊಳ್ಳುತ್ತಿವೆಂದು ಅಧಿಕಾರಿಗಳು ಭಾವಿಸಿದ್ದಾರೆ. They are in a fool's paradise. ನನಗೆ ಗೊತ್ತಿದೆ ಅವರು ಏನೇನು ಮಾಡುತ್ತಿದ್ದಾರೆಂದು. ನಾವು ನಿಮ್ಮ ಹತ್ತಿರ ಹೇಳುವುದಕ್ಕೆ ಬರುತ್ತಿಲ್ಲ. ಏಕೆಂದರೆ ನಾವು ಆರು ವರ್ಷ ಆಳಿದ್ದೇವೆ. ತಪ್ಪು ಮಾಡಿದ್ದೇವೆ. 22 ಜನ ಇಲ್ಲಿ ಬಂದು ಕುಳಿತಿದ್ದೇವೆ. ಇದರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ನಾವು ನೋವಿನಿಂದ ಇದನ್ನೆಲ್ಲಾ ತಡೆದುಕೊಂಡಿದ್ದೇವೆ. ಮಾನ್ಯ ಮೊಯ್ಲಿಯವರೇ,

ನಮಗೂ ಸಮಯ ಬರುತ್ತದೆ. Every dog will have its own day.. ನಮಗೆ ಎಷ್ಟು ನೋವು ಇದೆಯೆಂದು ನಿಮಗೆ ಅರ್ಥವಾಗುತ್ತಿಲ್ಲ. ಅಧಿಕಾರಿಗಳು ಏನೇನು ಮಾಡುತ್ತಿದ್ದಾರೆ, ಯಾವ ರೀತಿ ನಿಮಗೆ ಮಿಸ್‌ಲೀಡ್ ಮಾಡುತ್ತಾರೆ ಏನ್ನತಕ್ಕಂಥ ವಿಚಾರ. ಏಕೆಂದರೆ ನಾವು ಜನತಂತ್ರ ವ್ಯವಸ್ಥೆಯಲ್ಲಿ ಇರತಕ್ಕಂಥವರು. ಇವರ ಬೆದರಿಕೆಗೆ ಹೆದರತಕ್ಕಂಥವರು ಅಲ್ಲ. ಅಂತಹ ಎಮರ್ಜೆನ್ಸಿಯಲ್ಲಿ ಎರಡು-ಎರಡು ವರ್ಷ ಜೈಲುವಾಸ ಅನುಭವಿಸಿದಂಥವರು. ಅದಕ್ಕಿಂತ ಇನ್ನೇನು ಮಾಡುವುದಕ್ಕೆ ಆಗುತ್ತದೆ ನಿಮಗೆ ? ಏನು ಅಧಿಕಾರಿಗಳಿಂದ ನಮ್ಮನ್ನು ಗಲ್ಲಿಗೆ ಹಾಕಿಸುತ್ತೀರಾ ? ನಾನು ಹೇಳುತ್ತೇನೆ, ಇವರೆಲ್ಲ ಹೋಗಿಬಿಟ್ಟು ಸೃಷ್ಟಿಮಾಡಿ ನಮಗೆಲ್ಲಾ ಹೆದರಿಸ ತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಅಲ್ಲೊಬ್ಬ ಜರ್ನಲಿಸ್ಟ್ ಯಾವುದೋ ಒಂದು ಆಫೀಸ್ ಬಗ್ಗೆ ಎಕ್ಸ್‌ಪೋಶರ್ ಮಾಡಿದರೆ, ಆ ಹೆಣ್ಣುಮಗಳು ನನ್ನ ಹತ್ತಿರ ಬಂದು ಅಳುತ್ತಾಳೆ. ಹೀಗಾದರೆ ಏನಕ್ಕೆ ಅವರು ಬರಿಯಬೇಕು ? ನಿಮ್ಮ ಕಾಲದಲ್ಲಿ ಇದೆಲ್ಲ ಆಗಬಾರದು. ನೀವು ಮುಖ್ಯಮಂತ್ರಿಗಳಾಗಿರತಕ್ಕಂಥ ಸಂದರ್ಭದಲ್ಲಿ ಯಾವುದೇ ಅಧಿಕಾರಿಗಳೂ, ಸಹಿತ ಅವರು ಮಾಡದೇ ಇದ್ದರೆ ಅವರ ಚೇಲಾಗಳಿಂದ ಮಾಡಿಸಿರಬಹುದು. ಆ ಹೆಣ್ಣು ಮಗಳು ಬಂದು ನನ್ನ ಹತ್ತಿರ ಅಳುತ್ತಾಳೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮೂರು ತಿಂಗಳಲ್ಲಿ ಮೂರು ಲಾಕಪ್ ಸಾವು ಆಗಿದೆ. ತಾವು ಗೃಹ ಇಲಾಖೆಯನ್ನು ನೋಡಿಕೊಳ್ಳುತ್ತಾ ಇರತಕ್ಕಂಥ ಸಂದರ್ಭದಲ್ಲಿ ಇದು ಆಗಿದೆ.

ಶ್ರೀ ಪಿ. ಜಿ. ಆರ್ ಸಿಂಧ್ಯ :- ನಿಮ್ಮ ಬಗ್ಗೆ ವಿಶ್ವಾಸ ಇಲ್ಲವೆಂದು ನಾನು ಹೇಳುತ್ತಿಲ್ಲ.ಆದರೆ ಇದು ಆಗುತ್ತಾ ಇರತಕ್ಕಂಥಾದ್ದು ಸರಿ ದಾರಿ ಅಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಿನ್ನೆ ತಾವು ಹೇಳುವಾಗ, ಹೇಳಿದಿರಿ, ಈ ಮಹಾಲಕ್ಷ್ಮಿಪುರದ ವಿಚಾರದ ಬಗ್ಗೆ ಕಡತ ನೋಡಿದೆ. ಎಲ್ಲಾ ನೋಡಿದರೆ ಅಲ್ಲಿ ತಪ್ಪಾಗಿರತಕ್ಕಂಥದ್ದು ಕಾಣುತ್ತಿಲ್ಲ. ಆದರೂ ಸಹ ಇದನ್ನು ನಾನು ಸಿಓಡಿಗೆ ಕೊಟ್ಟಿದ್ದೇನೆ ಎಂದು ನೀವೇ ಹೀಗೆ ಹೇಳಿದ ಮೇಲೆ, ಮುಖ್ಯಮಂತ್ರಿಗಳು ಇದಕ್ಕೆ ಒಂದು ರೂಪು ಕೊಟ್ಟು ಇದೆಲ್ಲ ಚೆನ್ನಾಗಿ ಇದೆ, ಇದರಲ್ಲಿ ಏನೂ ಇಲ್ಲ, ಎನ್ನತಕ್ಕಂಥ ವಾದವನ್ನು ಈ ಸದನದಲ್ಲಿ ಹೇಳಿದರೆ ಇನ್ನೂ ಸಿಓಡಿ ಯವರು ಏನು ಮಾಡುತ್ತಾರೆ ? ಬಹುಶಃ ಮುಖ್ಯಮಂತ್ರಿಗಳು ಹೀಗೆ ಹೇಳಿದ್ದಾರೆ. ಆದ್ದರಿಂದ ನಾವು ಹೇಗಾದರೂ ಮಾಡಿ ಇದನ್ನು ಮುಚ್ಚಿಬಿಟ್ಟು ಮೂಲೆಗೆ ಹಾಕೋಣ ಎನ್ನುವ ಭಾವನೆ ಅವರಲ್ಲಿ ಬರುತ್ತದೆ. ನೀವು ಈಗ ಹದಿನೈದು ದಿವಸಗಳಿಂದ ಸ್ವಲ್ಪ ಬದಲಾಗುತ್ತಿದ್ದೀರೇನೋ ! ನಾವು ನಿಮ್ಮ ಬಗ್ಗೆ ಅಪಾರ ಗೌರವ ಇಟ್ಟು ಕೊಂಡಿದ್ದೇವೆ. ಇಷ್ಟು ಕೋಪ ತಾಪ ಏಕೆ ? ಇಷ್ಟು ವೀರಾವೇಶ ನಿಮಗೆ ಏಕೆ? ನಾವು ನಿಮಗೆ ಏನು ಮಾಡಿದ್ದೇವೆ? ಇತ್ತೀಚೆಗೆ ಹದಿನೈದು ದಿವಸಗಳಿಂದ ಈಚೆಗೆ ನಿಮ್ಮ ಕಣ್ಣಲ್ಲಿ ನಾವು ಬೇರೆ ರೀತಿ ಕಾಣುತ್ತಿದ್ದೇವೆಯೋ? ನಾವು ಪ್ರಾಮಾಣಿಕವಾಗಿ ನಿಮಗೆ ಹೇಳುತ್ತಿದ್ದೇವೆ. ಕೆಲವು ಅಧಿಕಾರಿಗಳು ನಮ್ಮ ಮೇಲೆ ತೋರಿಸತಕ್ಕಂಥ ಅಗೌರವದ ಈ ಸದನದಲ್ಲಿ ನಿಮಗೆ ಹೇಳಿದರೆ, ನಮಗೆ ನೋವಾಗಿದೆ. ಕೆಲವು ಪೋಲೀಸ್ ಅಧಿಕಾರಿಗಳು ಮಾಡಿರತಕ್ಕಂಥ ರೀತಿನೀತಿಗಳ ಬಗ್ಗೆ, ಇದರ ಬಗ್ಗೆ ವಿವರವಾಗಿ ಚರ್ಚೆ ಈ ಸದನದಲ್ಲಿ ನಡೆಯಬೇಕಾಗುತ್ತದೆ. ನಿಮ್ಮ ಪ್ರಜಾಪ್ರಭುತ್ವದ ರಕ್ಷಣೆ ನಮ್ಮದು ಎಂದು ಹೇಳುತ್ತಿದ್ದೀರಿ. ಬಡವರ ರಕ್ಷಣೆ ನಮ್ಮದು ಎಂದು ಹೇಳುತ್ತಿದ್ದೀರಿ, ಭ್ರಷ್ಟಾಚಾರ ಆಗದ ಹಾಗೆ ನೋಡಿಕೊಳ್ಳುತ್ತೇವೆ ಎಂದು ಹೇಳುತ್ತೀರಿ ? ಒಳ್ಳೆಯ ಆಡಳಿತವನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಇಷ್ಟೆಲ್ಲಾ ನೀವು ಒಂದು ಕಡೆ ಹೇಳಿ, ಮತ್ತೊಂದು ಕಡೆ ನಿಮ್ಮನ್ನು ಈ ವಿರಾಟಪರ್ವದಲ್ಲಿ ಒಳಗೆ ಸಿಕ್ಕಿರತಕ್ಕಂಥ ಈ ದುರ್ವ್ಯವಹಾರ ಮಾಡತಕ್ಕಂಥ, ಭ್ರಷ್ಟ ಅಧಿಕಾರಿಗಳು, ಕೆಲವು ಭ್ರಷ್ಟ ರಾಜಕಾರಣಿಗಳು ಇರುವಾಗ ಅದರ ಬಗ್ಗೆ ಬೆಂಬಲ ಕೊಟ್ಟು, ಏನೇನೂ ರೀತಿಯಾದಂಥ ವಿಚಾರಗಳನ್ನು ಹೇಳಿ ಅದಕ್ಕೆ ನೀವು ದಾರಿ ಕೊಡುವುದಕ್ಕೆ ಹೋಗಬೇಡಿ. ನಿಮ್ಮ ನೀತಿಯಂತೆ ನೀವು ನಡೆದುಕೊಳ್ಳುವುದಾದರೆ ನಿಮ್ಮ ಆಡಳಿತ ಸುಗಮವಾಗುತ್ತದೆ. ಚೆನ್ನಾಗಿ ಆಗುತ್ತದೆ. ಮಹಾಲಕ್ಷ್ಮಿಪುರಂ ವಿಷಯವನ್ನು ನೀವು ಮುಚ್ಚಿ ಹಾಕುವುದಾದರೆ, ಜನರಿಗೆ ನಿಮ್ಮ ಬಗ್ಗೆ ಹೇಗೆ ನಂಬಿಕೆ ಬರುತ್ತದೆ ? ಮಹಾಲಕ್ಷ್ಮಿಪುರದಲ್ಲಿ ಲಾಕಪ್‌ನಲ್ಲಿ ಸತ್ತಿದ್ದಾರೆ. ಕೆಂಗೇರಿಗೇಟ್ ಪೋಲೀಸ್ ಸ್ಟೇಷನ್ ಲಾಕಪ್‌ನಲ್ಲಿ

ಸತ್ತಿದ್ದಾರೆ. ಇವತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಮುಖಪುಟದಲ್ಲಿ ಪೋಲೀಸ್ ಕಾನ್‌ಸ್ಟೇಬಲ್ ಹೇಳಿದ್ದಾನಲ್ಲ, ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಬಹಳ ಬುದ್ಧಿವಂತಿಕೆಯಿಂದ ಹೇಳುತ್ತಾನೆ. ನಿಜವಾಗಿಯೂ ಸರ್ಕಾರ ಅವನಿಗೆ ಮಾನ್ಯತೆ ಕೊಡಬೇಕು. ಬಹುಮಾನ ಕೊಡಬೇಕು. ಎಷ್ಟು ಧೈರ್ಯದಿಂದ ಅವನು ನ್ಯಾಯಾಧೀಶರ ಹತ್ತಿರಕ್ಕೆ ಹೋಗಿ ಆ ಕಾಲವನ್ನು ಹೇಳಿ, ಪ್ರತಿಯೊಂದು ಹೇಳಿದರೂ ತಾವು ನಿನ್ನೆ ಹಾಗೆ ಹೇಳಿದಾಗ, ಏನೋ ಮಾಡುವುದಕ್ಕೆ ಹೋದೆವು ಎನ್ನತಕ್ಕಂಥ ರೀತಿ ನಮಗೆ ಆಯಿತು. ಕೆಲವು ಪೋಲೀಸ್ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಇಲ್ಲಿ ತಲೆ ಹಾಕುತ್ತಿದ್ದಾರೆ ಎಂದು ಮಾತನಾಡತ್ಕಂಥ ಪರಿಸ್ಥಿತಿ ನಮಗೆ ಬಂದಿದೆ. ಅದನ್ನು ನಾವು ನಿಮಗೆ ಹೇಳುತ್ತೇವೆ. ತಾವು ಪ್ರಾಮಾಣಿಕವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಒಳ್ಳೆಯ ಆಡಳಿತ ಕೊಡುತ್ತೇವೆ ಎಂದು ನಿನ್ನೆ ದಿವಸ ಇದೇ ಸದನದಲ್ಲಿ ಭರವಸೆಯನ್ನು ಕೊಟ್ಟಿರಿ, ನಮ್ಮದು ಚೊಕ್ಕ ಆಡಳಿತವೆಂದು ಹೇಳಿದಿರಿ. ಅದನ್ನು ಕೇಳಿ ನಾವೆಲ್ಲಾ ಸಂತೋಷಪಟ್ಟಿದ್ದೇವೆ ಮತ್ತು ಎಲ್ಲಾ ರೀತಿಯ ಬೆಂಬಲವನ್ನು ಕೊಟ್ಟಿದ್ದೇವೆ. ಆದರೆ ನನಗನ್ನಿಸುತ್ತದೆ. ಆ ಪೋಲೀಸ್ ಸ್ಟೇಷನ್‌ಗೆ ತಾವು ಹೋಗಿದ್ದೀರಾ ? ನಿಮಗೆ ಮಾಹಿತಿಯನ್ನು ಕೊಟ್ಟವರು ಯಾರು? ನೀವು ಮಹಾಲಕ್ಷ್ಮಿಪುರಂ ಪೋಲೀಸ್ ಸ್ಟೇಷನ್‌ಗೂ ಹೋಗಿದ್ದಿರಾ? ಆ ಸ್ಥಳವನ್ನು ನೋಡಿದ್ದೀರಾ? ಆ ಲಾಕಪ್ಪನ್ನು ನೋಡಿದ್ದೀರಾ ? ಇಂತಹ ನೂರಾರು ಲಾಕಪ್ ಸಾವುಗಳು ನಡೆಯುತ್ತಿವೆ. ದಯವಿಟ್ಟು ಸಂಪೂರ್ಣವಾದ ಭಯೋತ್ಪಾದನೆ ಮಾಡಬೇಕಾದದ್ದು ತಮ್ಮ ಕರ್ತವ್ಯ. ಆದ್ದರಿಂದ ದಯಮಾಡಿ ಇದರ ಬಗ್ಗೆ ಸ್ಪಷ್ಟ, ಪ್ರಾಮಾಣಿಕ ಹೇಳಿಕೆಯನ್ನು ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಈ ನಂಜುಂಡಯ್ಯನ ವಿಷಯದಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮುಂಜಾನೆ ಸಾಕಷ್ಟು ಚರ್ಚೆಯಾಗಿದೆ. ನಾವು ಇದರ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದೇವೆ ಮತ್ತು ಯಾವ ಪ್ರಕಾರ ಪೋಲೀಸ್ ಅಧಿಕಾರಿಗಳು, ಮುಖ್ಯಮಂತ್ರಿಗಳನ್ನು ತಪ್ಪು ದಾರಿಗೆ ಎಳೆಯುತ್ತಾರೆ ಮತ್ತು ಅವರ ಮೇಲೆ ಡಿಪೆಂಡ್ ಆಗಿ, ಮುಖ್ಯ ಮಂತ್ರಿಯವರು ಯಾವ ಪ್ರಕಾರ ರಾಂಗ್ ಸ್ಟೇಟ್‌ಮೆಂಟ್ ಕೊಡುತ್ತಾರೆಂಬುದನ್ನು ಬಹಳ ಸವಿಸ್ತಾರವಾಗಿ, ವಿವರವಾಗಿ ಈ ಸದನದ ಮೂಲಕ, ತಮ್ಮ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತಂದಿರುತ್ತೇವೆ. ಮಾನ್ಯ ಕಾರ್ಮಿಕ ಸಚಿವರು ಹೇಳಿದರು, ನಾನು ಎಲ್ಲವನ್ನೂ ನೋಟ್ ಮಾಡಿಕೊಳ್ಳುತ್ತೇನೆ. ಎಲ್ಲವನ್ನೂ ಮುಖ್ಯ ಮಂತ್ರಿಗಳಿಗೆ ಕೊಟ್ಟಿದ್ದೇನೆ ಎಂದು ಅವರು ಕೊಟ್ಟಿದ್ದರೆ ಬಹಳ ಸಂತೋಷ. ಇದರಲ್ಲಿ ನಾನು ಎರಡು ಮಾತಷ್ಟೇ ಹೇಳುತ್ತೇನೆ. ನಾವು ಸಿಬಿಐ ವಿಚಾರಣೆ ಮಾಡಿ ಎಂದು ಕೇಳಿದ್ದೇವೆ. ಏಕೆಂದರೆ, ಸಿಓಡಿಯಿಂದ ಸತ್ಯ ಹೊರಬರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇವತ್ತು ಅಧಿಕಾರಿ ಇನ್‌ವಾಲ್ವ್ ಆಗಿದ್ದಾನೆ. ಮೊನ್ನೆ ಯಾವ ಯಾವ ಅಧಿಕಾರಿ ಅಡ್ವೈಸ್ ಮಾಡಿದರು. ಆ ಅಡ್ವೈಸ್ ಮೇಲೆ ತಾವು ನಿನ್ನೆ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಎರಡನೆಯದು, ಆ ಕಾನ್‌ಸ್ಟೇಬಲ್, ಮ್ಯಾಜಿಸ್ಟ್ರೇಟ್ ಮುಂದೆ ಸ್ಟೇಟ್‌ಮೆಂಟ್ ಮಾಡಿದ್ದ ಅದನ್ನು ನಿಮ್ಮ ಗಮನಕ್ಕೆ ಏಕೆ ತರಲಿಲ್ಲ ? ಆ ಅಧಿಕಾರಿಗಳ, ಬೋನಾಫೈಡ್ ಇದ್ದರೆ, ಮ್ಯಾಜಿಸ್ಟ್ರೇಟ್ ಮುಂದೆ ಮಾಡಿದ ಸ್ಟೇಟ್‌ಮೆಂಟನ್ನು ತಮ್ಮ ಗಮನಕ್ಕೆ ತರಬಹುದಿತ್ತು. ಪಂಚನಾಮ ತಂದರು. ಮೆಡಿಕಲ್ ರಿಪೋರ್ಟ್ಸ್ ತಂದರು. ಎಫ್.ಐ.ಆರ್ ತಂದರು. ಆದರೆ, ಅದೇ ಪೋಲೀಸ್ ಅಧಿಕಾರಿಗಳು, ತಮ್ಮನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಮ್ಯಾಜಿಸ್ಟ್ರೇಟ್ ಮುಂದೆ ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಅದನ್ನು ಏಕೆ ತರಲಿಲ್ಲ ? ಹಾಗಾಗಿ ಇವತ್ತು ನಿಮ್ಮ ಪೋಲೀಸ್ ಅಧಿಕಾರಿಗಳು, ನಿಮಗೆ ಸರಿಯಾದ ಮಾರ್ಗದರ್ಶನ ಮಾಡುತ್ತಾ ಇಲ್ಲ. ತಮ್ಮ ಕೆಳಗಿನ ಅಧಿಕಾರಿಗಳನ್ನು ರಕ್ಷಣೆ ಮಾಡುವುದಕ್ಕೆ ತಪ್ಪುಮಾಹಿತಿ ಕೊಟ್ಟಿದ್ದಾರೆ. ಅಲ್ಲಿದ್ದ ಸಿ.ಬಿ.ಐ. ತನಿಖೆಯಿಂದ ನಿಜವಾದ ಸತ್ಯ ಹೊರ ಬರುವುದಕ್ಕೆ ಸಾಧ್ಯವಿದೆ. ಅಲ್ಲಿದ್ದ ಬೆಟ್ಟೆಗೌಡ ಸಿಬಿಐ ಅಲ್ಲಿದ್ದ ಪಿಎಸ್‌ಐ ಇವರನ್ನು ತಕ್ಷಣ ಸಸ್ಪೆಂಡ್ ಮಾಡಬೇಕು ಕೇವಲ ಒಬ್ಬ ಕಾನ್‌ಸ್ಟೇಬಲ್‌ನ್ನು ಬಲಿಕೊಟ್ಟು ಈ ಕೇಸ್ ಮುಗಿಸುವುದಕ್ಕೆ ಆಗುವುದಿಲ್ಲ. ಜನರು ಬಹಳ ಜಾಣರಿದ್ದಾರೆ. ತಾವೇನು ಸ್ವಚ್ಛ ಧಕ್ಷ ಮತ್ತು ಒಳ್ಳೆಯ ಆಡಳಿತ ಕೊಡುತ್ತೇವೆಂದು ಹೇಳಿದ್ದೀರಿ ಮತ್ತು ನಿಜವಾಗಿಯೂ ಈ ಮನಸ್ಸು ಇದ್ದರೆ, ಸಿಬಿಐ ಎನ್‌ಕ್ವೈರಿ ಮಾಡಿ, ಕ್ರಮ ತೆಗೆದುಕೊಳ್ಳಿ, ಮತ್ತೆ

ಸುಪ್ರೀಂಕೋರ್ಟ್ ಮುಂದೆ ಜಡ್ಜ್‌ಮೆಂಟ್ ಏನಾಗಿದೆ, ಅದನ್ನು ಆ ದಿವಸ ಪತ್ರಿಕೆಯಲ್ಲಿ ಓದಿದ್ದೇನೆ. ಎಲ್ಲೆಲ್ಲಿ ಲಾಕಪ್ ಸಾವು ಆಗಿದೆ. ಅದಕ್ಕೆ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ. ಎಲ್ಲೆಲ್ಲಿ ಲಾಕಪ್ ಸಾವು ಆಗಿದೆ ಅಲ್ಲೆಲ್ಲಾ ಪರಿಹಾರ ಕೊಡತಕ್ಕ ವ್ಯವಸ್ಥೆ ಸಹ ಸರ್ಕಾರದಿಂದ ಆಗಬೇಕು. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ತಾವು ಸಂಸದೀಯ ಸಚಿವರಾಗಿಯೂ ಕೆಲಸ ಮಾಡಿದ್ದೀರಿ, ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುವಾಗ ಟೀಕೆ ಟಿಪ್ಪಣಿ ಮಾಡುವುದು ನಮ್ಮ ಕರ್ತವ್ಯ. ನಾವು ಇಲ್ಲಿ ಆ ಕೆಲಸ ಮಾಡಲಿಲ್ಲವೆಂದರೆ, ನಾಳೆ ಪತ್ರಿಕೆಯವರೂ ನಾವು ಸರ್ಕಾರದ ಪರವಾಗಿದ್ದೇವೆಂದು ಹೇಳುತ್ತಾರೆ. ಆದ್ದರಿಂದ, ವಿರೋಧ ಮಾಡುವುದು ನಮ್ಮ ಕರ್ತವ್ಯ ಹಾಗೂ ಜನಪರವಾಗಿ ನಾವು ಮಾತನಾಡಬೇಕಾಗಿದೆ. ನಾಡಿನ ಜನರ ಪರವಾಗಿ ಹೋರಾಟ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಾವು ಹೊರಗೆ ಹೋದ ನಂತರ ತಾವು ನಮ್ಮ ಬಗ್ಗೆ ಮಾತನಾಡಬಾರದು. ನಿಮಗೆ ಧೈರ್ಯವಿದ್ದರೆ, ಈಗಲೇ ಮಾತನಾಡಿ. ನಿಮಗೆ ಉತ್ತರವನ್ನು ಕೊಡುತ್ತೇವೆ. ನಾವು ಹೊರಗಡೆ ಹೋದ ನಂತರ, ನೀವು ಮಾತನಾಡಿದರೆ, ನಿಮಗೇನು ಗೌರವ ಬರುತ್ತದೆ ಮತ್ತು ಅದು ಒಳ್ಳೆಯ ಪದ್ಧತಿಯೂ ಅಲ್ಲ. ಇನ್ನು ಮುಂದೆ ತಾವು ಮಾತನಾಡಬೇಕಾಗಿದ್ದರೆ, ನಾವು ಇದ್ದಾಗ ಮಾತನಾಡಿ. ನಾವು ಹೊರಗಡೆ ಹೋದ ನಂತರ ಮಾತನಾಡುವ ಪ್ರಯತ್ನ ಮಾಡಬೇಡಿ. ಇಷ್ಟೇ ಹೇಳಿ, ತಾವು ಕ್ರಮ ತೆಗೆದುಕೊಳ್ಳಬೇಕೆಂದು ಏನಂತಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಲಿ (ಮುಖ್ಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು, ಮಾನ್ಯ ಸಿಂಧ್ಯರವರು, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ನಿನ್ನೆ ಕೂಡ, ಮಹಾಲಕ್ಷ್ಮಿಪುರದಲ್ಲಿ ಆದ ಲಾಕಪ್ ಸಾವಿನ ಬಗ್ಗೆ ವಿವರವಾಗಿ ಚರ್ಚೆ ಮಾಡಿದರು. ನಿನ್ನೆ ಈ ಬಗ್ಗೆ ಚರ್ಚೆಯಾದ ನಂತರ, ನಾನು ಉತ್ತರವನ್ನು, ಕೂಡ ಕೊಟ್ಟಿದ್ದೇನೆ. ಆದರೆ, ಇವತ್ತು ಮುಖ್ಯಮಂತ್ರಿಯವರು ನಮಗೆ ಕಾಣುವುದಕ್ಕೇ ಸಿಗುವುದಿಲ್ಲವೆಂದು ಹೇಳಿದ್ದಾರೆ. ನಾನು ನಿನ್ನೆ ಕೂಡ ಹೇಳಿಕೆ ಕೊಟ್ಟಿದ್ದೇನೆ ನಿನ್ನೆ ಮಧ್ಯಾಹ್ನ ಸುಮಾರು ಮೂರು ಗಂಟೆಯವರೆಗೆ, ಆ ಸದನದಲ್ಲಿ ಬಿಡಿಎ ಬಗ್ಗೆ ಚರ್ಚೆ ಇತ್ತು. ಇವತ್ತು ಬೆಳಿಗ್ಗೆ ಪ್ರಶ್ನೋತ್ತರ ಇತ್ತು. ತಮಗೆ ಗೊತ್ತಿದೆ, ಇಲ್ಲಿಯೂ ಸದನ ನಡೆಯುತ್ತಿದೆ, ಅಲ್ಲಿಯೂ ಸದನ ನಡೆಯುತ್ತಿದೆ. ಅಲ್ಲಿ ನಮ್ಮ ನಾಯಕರು ಉತ್ತರ ಕೊಡುತ್ತಾರೆ. ಆದರೆ, ಕೆಲವು ವಿಷಯಗಳಲ್ಲಿ ನಾನು ಅಲ್ಲಿ ಇರಬೇಕಾಗುತ್ತದೆ, ಅಟೆಂಡ್ ಮಾಡಬೇಕಾಗುತ್ತದೆ, ಬಿಡಿಎ ವಿಚಾರ ಅಲ್ಲಿ ಬಂತು. ಅಲ್ಲಿ ಮಂತ್ರಿಗಳೂ ಇರುತ್ತಾರೆ ಆವರೂ ನಾನು ಉತ್ತರ ಕೊಡಬೇಕಾಗುತ್ತದೆ. ಇಲ್ಲಿಂದ ತಪ್ಪಿಸಿಕೊಳ್ಳುತ್ತೇನೆಂದು ಅಲ್ಲಿ ಹೇಳುವುದು, ಅಲ್ಲಿಂದ ತಪ್ಪಿಸಿಕೊಳ್ಳುತ್ತೇನೆಂದು ಇಲ್ಲಿ ಹೇಳುವುದು, ಇದು ಸೌಜನ್ಯದ ಮಾತಾಗುವುದಿಲ್ಲ. ಏಕೆಂದರೆ, ವಿರೋಧಪಕ್ಷದ ನಾಯಕರು, ಹಿರಿಯ ಸದಸ್ಯರು ಮಾತನಾಡುವಾಗ, ನಾನು ಬರಬೇಕು, ಕೇಳಬೇಕು ಮತ್ತು ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡಬೇಕೆಂಬ ಸದಭಿಪ್ರಾಯ ನಮ್ಮಲ್ಲಿ ಇದೆ. ಈ ರೀತಿಯ ಪಾರ್ಲಿಮೆಂಟರಿ ಸಜ್ಜನಿಕೆಯನ್ನು ಯಾವಾಗಲೂ ಕಾಪಾಡಿಕೊಂಡು ಹೋಗುತ್ತೇವೆ. ಸನ್ಮಾನ್ಯ ದೇಶಪಾಂಡೆಯವರು, ನಾವು ಹೊರಗೆ ಹೋದ ಮೇಲೆ ಮಾತನಾಡುತ್ತೀರಿ ಎಂದು ಹೇಳಿದರು. ಹಾಗೇನೂ ಇಲ್ಲ. ನಾನು ಮಾತನಾಡಿದ ಎಲ್ಲಾ ವಿಷಯಗಳನ್ನು ಮಾನ್ಯ ನಾಗರಾಜುರವರು ಹಾಗೂ ಸಿಂಧ್ಯರವರೂ ಕೇಳಿಕೊಂಡಿದ್ದಾರೆ ಅದು ರೆಕಾರ್ಡ್‌ನಲ್ಲಿಯೂ ಇದೆ. ಇದೇನೂ ಗುಟ್ಟಿನಲ್ಲಿ ಇಲ್ಲ. ಅವರು ಎಲ್ಲವನ್ನೂ ಕೇಳಿ, ಅವರ ಬಾಗಿಲು ಹಾಕಿದ ನಂತರ ಕುಳಿತುಕೊಂಡೆ. ನಾನು ಒಂದು ಶಬ್ದ ಕೂಡ ಮಾತನಾಡಲಿಲ್ಲ. ನೀವು ಸಭಾತ್ಯಾಗ ಮಾಡಿದಿರಿ. ಇಂಟ್ರಡಕ್ಷನ್ ಟೈಮ್‌ನಲ್ಲಿ, ತಾವು ದೂರ ಹೋದಿರಿ. ಇವತ್ತು ಆ ಬಿಲ್ಲಿನಲ್ಲಿ ಇದೆ. ಸಂವಿಧಾನಾತ್ಮಕವಾಗಿ, ಮೊದಲ ಬಾರಿಗೆ ಈ ದೇಶದಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್‌ಗೆ ರಿಸರ್ವೇಷನ್‌ಗೆ ಪ್ರಾವಿಷನ್ ಮಾಡಿದ್ದೇವೆ. What are we to think about it. ? ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ವಾಕ್ ಔಟ್ ಮಾಡಿದರೆ ಮುಂದೆ ನೀವು ಏನು ಮಾಡಬಹುದು ಎನ್ನುವ ಭಯ ನಮಗೆ ಬರುವುದಿಲ್ಲವೇ ?

(ಗೊಂದಲ)

Sri R. V. Deshpande : We have demanded reservation for backward classes

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ :- ಈಗ ಪ್ರಶ್ನೆ ಏನು ಎಂದು ಹೇಳಿದರೆ ತಾವು ಬಹಳ ಜೋರಾಗಿ ಮಾತನಾಡಿ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡದೇ ಹೊರಗಡೆ ಹೋಗಿಬಿಟ್ಟಿರಿ. ನೀವು ವಾಕ್ ಔಟ್ ಮಾಡಿದಿರಿ. ನೀವೆಲ್ಲಾ ಮಾತನಾಡಿ ಕೊಂಡಾಗ ರಾಜಕೀಯವಾಗಿ ವಾಕ್ ಔಟ್ ಮಾಡುವಾಗ ರಾಜಕೀಯವಾಗಿ ನಾವು ಕೂಡಾ ಮಾತನಾಡಬೇಕಾಗುತ್ತದೆ. ರಾಜಕೀಯವಾಗಿ ನಾವು ನಿಮ್ಮನ್ನು ಎದುರಿಸಬೇಕಾಗುತ್ತದೆ ವೈಯುಕ್ತಿಕವಾಗಿ ಇದರಲ್ಲಿ ಏನೂ ಇಲ್ಲ. ಸಾಂಸ್ಕೃತಿಕವಾದಂಥ ಪರಂಪರೆ ಸಜ್ಜನಿಕೆಗೆ ನಾವು ಸದಾ ಸಿದ್ದರಾಗಿದ್ದೇವೆ. ಆದರಲ್ಲಿ give and take ಪ್ರಶ್ನೆ ಏನೆಂದರೆ ನೀವು ಏನು ಕೊಡಬೇಕು ಸಜ್ಜನಿಕೆ ಅದನ್ನು ನಾವು ಕೊಡಬಾರದು ಅಂತ ಏನೂ ಇಲ್ಲ ಸಜ್ಜನಿಕೆ ನಾವು ತೋರಿಸುತ್ತೇವೆ. ಆದರೆ ರಾಜಕೀಯವಾಗಿ ನೀವು ಬಹಳ ಎತ್ತರದ ಸ್ವರದಿಂದ ಮಾತನಾಡಿ ವಾಕ್ ಔಟ್ ಮಾಡಿ ನಾವೆಲ್ಲಾ ತಪ್ಪಗೆ ಸುಮ್ಮನೆ ಬಾಯಿ ಮುಚ್ಚಿ, ಕೈ ಮುಚ್ಚಿ, ಕಣ್ಣು ಮುಚ್ಚಿ ಕುಳಿತುಕೊಳ್ಳಬೇಕು ಎಂದು ಹೇಳಿದರೆ ಜನರೂ ಕೂಡ ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ಅದನ್ನು ಕೂಡ ನಾವು ಆಲೋಚನೆ ಮಾಡಬೇಕಾಗುತ್ತದೆ. ಇದು ರಾಜಕೀಯ ಕಂಪಲ್ಷನ್ ತಾವು ಕೂಡ ಸ್ವಲ್ಪ ಸಜ್ಜನಿಕೆ, ಸಹನೆ ತೋರಿಸುವುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದರೆ ತಾವು ಬಾಗಿಲು ಹಾಕಿ ಹೊರಗೆ ಹೋದ ಮೇಲೆ ನಾನು ಒಂದು ಶಬ್ದವನ್ನು ಮಾತನಾಡಲಿಲ್ಲ ತಾವು ನಿಲ್ಲದಿದ್ದರೆ, ತಾವು ಏನು ತಿಳಿದುಕೊಂಡಿರಿ ನಾವು ಜೋರಾಗಿ ಮಾತನಾಡಿ ಮೇಜು ಗುದ್ದಿ ಹೋದ ಮೇಲೆ ವೀರಪ್ಪ ಮೊಯಿಲಿಯವರು ಈ ಕಡೆಯವರೆಲ್ಲಾ ಸಪ್ಪಗೆ ಕುಳಿತುಕೊಳ್ಳುತ್ತಾರೆ, ನೋಡಿಯಪ್ಪ ಸಪ್ಪಗೆ ಕುಳಿತುಕೊಂಡಿದ್ದಾರೆ ಅಂತ ಹೇಳಿ ಈ ಚಂದ ನೋಡಬೇಕು ಅಂತ ಹೇಳಿ ನೀವಿದ್ದಿರಿ ಆದರೆ ಆ ಚಂದ ಕಾಣಲಿಲ್ಲ. ನಾವು ಕೂಡ ಎದುರು ಕೊಟ್ಟುಬಿಟ್ಟೆವು. ವ್ಯತ್ಯಾಸ ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ :- ಆ ಪಾತ್ರ ಬೇಕಾಗಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :- ನಾವೆಲ್ಲ ಒಂದೊಂದು ಪಾತ್ರ ವಹಿಸಿಕೊಳ್ಳಬೇಕು. ಆ ಪಾತ್ರ ವಹಿಸಿಕೊಳ್ಳದಿದ್ದರೆ ಪಾತ್ರ ನಿರ್ವಹಣೆ ಸರಿ ಆಗುವುದಿಲ್ಲ. ಏಕೆಂದರೆ ಜನರು ನೋಡುತ್ತಾರೆ. ನಾವು ಮಾಡುವುದು ಅದೇ ನೀವೂ ಮಾಡುವುದು ಅದೇ .....

ಶ್ರೀ ಬಿ.ಎಚ್. ಬನ್ನಿಕೋಡ್ :- ಒಂದೇ ಒಂದು ಪಾತ್ರ ವಹಿಸಿಕೊಂಡರೆ ಒಪ್ಪುತ್ತೇನೆ. ಎಲ್ಲಾ ಪಾತ್ರಗಳನ್ನು ನೀವೇ ವಹಿಸಿಕೊಳ್ಳುತ್ತೀರಿ ಅದಕ್ಕೆ ನಾವು ಹೇಳುವುದು.

ಶ್ರೀ ಎಂ. ವೀರಪ್ಪ ಮೊಯಿಲಿ :- ಈಗ ವಿಷಯಕ್ಕೆ ಬರೋಣ. ಮಹಾಲಕ್ಷ್ಮಿಪುರದ ಘಟನೆ ಬಗ್ಗೆ ನಾನು ನಿನ್ನೆ ಏನು ಹೇಳಿದೆ ದಯಮಾಡಿ ತಾವು ರೆಕಾರ್ಡ್ ತರಿಸಿ ನೋಡಬೇಕು. ನಾನೇನೂ ಮುಚ್ಚಿಡಲಿಕ್ಕೆ ಪ್ರಯತ್ನ ಮಾಡಿಲ್ಲ. ನಾನೇನು ಹೇಳಿದೆ ಅಲ್ಲಿ ಸ್ವಲ್ಪ ವ್ಯತಿರಿಕ್ತವಾಗಿ ತೋರುತ್ತಿದೆ ಎಂದು ಹೇಳಿದೆ. ಆದರಲ್ಲಿ ಕೆಲವು ಶಬ್ದಗಳನ್ನು ದಯಮಾಡಿ ನೋಡಿ I still remember. ನಾವೇನು ಹೇಳಿದೆ ಆ ಕಾನ್ಸ್ಟೇಬಲ್ ಹೇಳಿಕೆಯಲ್ಲಿ ಸ್ವಲ್ಪ ವ್ಯತಿರಿಕ್ತವಾಗಿ ಇದೆ ಎಂದು ಹೇಳಿದ್ದೇನೆ. I have gone on record. I remember .

ಅಷ್ಟೇ, ನನಗೆ ನೆನಪಿನ ಶಕ್ತಿ ಬಹಳ ಇದೆ I did not go through the record.

ಶ್ರೀ ವಾಟಾಳ್ ನಾಗರಾಜ್ :- ನಮಗೆ ನೆನಪು ಇಲ್ಲ ಎಂದು ತಾವು ತಿಳಿದಿದ್ದೀರೋ ?

ಶ್ರೀ ಎಂ. ವೀರಪ್ಪ ಮೊಯಿಲಿ :- ನೆನಪು ಇದ್ದರೂ ಕೆಲವು ರಾಜಕೀಯ ಕಾರಣಗಳಿಂದ ಮರೆತು ಬಿಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ :- ಇದನ್ನು ತಾವು ನಂಬುತ್ತೀರಾ ? ನಿಜವಾಗಿ ಹೇಳಿ ನಿಮ್ಮ ಹೃದಯ ಬಿಚ್ಚಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಹೃದಯ ಪೂರ್ವಕವಾಗಿ ಹೇಳುತ್ತಿಲ್ಲ. ನೀವು ರಾಜಕೀಯ ಕಾರಣಕ್ಕಾಗಿ ಹೇಳಬೇಕಾಗುತ್ತದೆ ಅಂತ ಹೇಳಿದಿರಿ. ಅಂತ ನಾನು ಹೇಳಿದೆ. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. I am on record. ನಾನು ಆ ಎಲ್ಲಾ ಹೇಳಿಕೆಗಳನ್ನು ನೋಡಿದ ಮೇಲೆ ನನಗೆ ಪೂರ್ಣವಾಗಿ ಕನ್ವಿನ್ಸ್ ಮಾಡತಕ್ಕಂಥ ಕುರುಹು ಸಿಕ್ಕಿಲ್ಲ. ಸಿಗುತ್ತಿದ್ದರೆ ತಕ್ಷಣ ಕಾರ್ಯವಿಚಾರಣೆ ಮಾಡುತ್ತೇನೆ. ಅದೇ ನೆಕ್ಸ್ಟ್ ಸೆಂಟೆನ್ಸ್ ನಾನು ಹೇಳಿದೆ ಅದೇನೆಂದರೆ ಆ ಕಾನ್ಸ್ಟೇಬಲ್ ಸ್ಟೇಟ್‌ಮೆಂಟ್‌ನಲ್ಲಿ ಸ್ವಲ್ಪ ವ್ಯತಿರಿಕ್ತ ನನಗೆ ಕಾಣುತ್ತಿದೆ. ಆ ಕಾರಣದಿಂದ ಸಿಓಡಿಗೆ ಹಾಕಿದ್ದೇನೆಂದು ಹೇಳಿದೆ. I have not suppressed anything . ಅವರು ಸುಳ್ಳು ಮಾಹಿತಿ ಕೊಟ್ಟಿದ್ದಾರೆಂದು ದೇಶಪಾಂಡೆಯವರು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರು ಸುಳ್ಳು ಮಾಹಿತಿ ನೀಡಿದ್ದಾರೆ, ಈ ಸದನವನ್ನು ಈ ನಾಡನ್ನು ತಪ್ಪುದಾರಿಗೆ ಎಳೆದಿದ್ದಾರೆ ಎಂದು ಹೇಳಿದರು. ನಾನು ಏನು ಹೇಳಿದೆ ಆ ಕಾನ್ಸ್ಟೇಬಲ್ ಹೇಳಿಕೆ ಏನು ಅಂತ ನೀವೂ ಕೇಳಲಿಲ್ಲಿ ನಾನೂ ಹೇಳಲಿಲ್ಲ. ಆ ಕಾನ್ಸ್ಟೇಬಲ್ ಹೇಳಿಕೆಯಲ್ಲಿ ಸ್ವಲ್ಪ ವ್ಯತಿರಿಕ್ತ ಕಾಣುತ್ತಿದೆ. ಎಂದು ತಿಳಿದೇ ನಾನು ಇದನ್ನು ಸಿಓಡಿಗೆ ಕೊಟ್ಟಿದ್ದೇನೆಂದು ಹೇಳಿದೆ. ಅವರು ಹೇಳಿದ ಹಾಗೆ ಆ ಎಲ್ಲಾ ಸ್ಟೇಟ್‌ಮೆಂಟ್‌ನ್ನು ಕೂಡ ಸಿ.ಓ.ಡಿಗೆ ಹಾಕಿದ್ದೇವೆ. ಈ ತರಹ ಆ ಕಾನ್ಸ್ಟೇಬಲ್ ಹೇಳಿಕೆಯಲ್ಲಿ ವ್ಯತಿರಿಕ್ತ ಕಾಣುತ್ತಿದೆ ಆದ್ದರಿಂದ ಸಿಓಡಿಗೆ ಹಾಕಿದ್ದೇವೆಂದು ಹೇಳಿದೆ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಯಾವುದೇ ಸುಳ್ಳು ಮಾಹಿತಿಯನ್ನು ಸದನಕ್ಕೆ ನೀಡಿಲ್ಲ. ಈ ಸದನವನ್ನು ನಾಡನ್ನು ತಪ್ಪು ದಾರಿಗೆ ಎಳೆಯುವಂಥ ಪ್ರಶ್ನೆ ಇಲ್ಲ. ಇಲ್ಲಿ ಈಗ ಅವರು ಎತ್ತಿದ್ದಾರೆ. ಇದು ಎಲ್ಲಾ, I have not closed the chapter. ಸಿಓಡಿಗೆ ಕೊಟ್ಟಿದ್ದೇವೆ. ಸಿಓಡಿಗೆ ಕೊಟ್ಟ ಮೇಲೆ ನಾವು ಕೆಲವು ಮಾಹಿತಿಗಳನ್ನು ತರಿಸಿದ್ದೇವೆ. ಪತ್ರಿಕೆಯಲ್ಲಿ ಇದು ಬಂದ ಮೇಲೆ ಆ ಕಾನ್ಸ್‌ಟೇಬಲ್ ಒಂದು ಹೇಳಿಕೆ ಕೊಟ್ಟಿದ್ದಾನೆ. ಆ ಕಾನ್ಸ್‌ಟೇಬಲ್ ಹೇಳಿಕೆ ಸರಿ ಇಲ್ಲ ಆ ಕಾನ್ಸ್‌ಟೇಬಲ್ ಚರಿತ್ರೆ ಏನು ಇದೇ ಅವನ ಹಿನ್ನೆಲೆ ಏನು ಇದೆ ಅದನ್ನು ನಾನು ಇಲ್ಲಿ ಹೇಳುವುದಿಲ್ಲ. ಅದನ್ನು ಹೇಳಿದರೆ ಸಿಓಡಿಗೆ ಒಂದು ರೀತಿಯಲ್ಲಿ ತಪ್ಪು ದಾರಿಗೆ ಎಳೆದಂತಾಗುತ್ತದೆ . I don't want to give a lead to the investigation. As a Chief Minister I should not give either a negative or positive lead to the investigation. ತಪ್ಪು ಏನೂ ಮಾಡಿಲ್ಲ. ಈಗ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ Whatever may be the affidavit,

ಅದು ಸತ್ಯ ಏನು ಎಂದು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ತಾವುಗಳು ಆ ವ್ಯಕ್ತಿ 15 ದಿವಸ ಲಾಕ್‌ಅಪ್‌ನಲ್ಲಿದ್ದರು ಎಂದು ಬೆಳಿಗ್ಗೆ ಹೇಳಿದ್ದೀರಿ. ಡಾ ಜೀವರಾಜ್ ಆಳ್ವರವರು 40 ದಿವಸಗಳಿಂದ ಇದ್ದರು ಎಂದು ಹೇಳಿದ್ದಾರೆ. ಪೋಲೀಸರು ನಿನ್ನೆ ಕೊಟ್ಟಂಥ ವರದಿಯ ಪ್ರಕಾರ ಮೊದಲನೇ ದಿವಸದಿಂದ ಇದ್ದ ಎಂದು ಇದೆ. ಹೀಗೆ ಬೇರೆ ಬೇರೆ ವರ್ಷನ್ಸ್ ನಮ್ಮ ಮುಂದೆ ಇದೆ. ಈಗ ಅಫಿಡವಿಟ್ ಕೊಟ್ಟಿದ್ದಾರೆ. ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟರ್ಸ್‌ನ ಕಡೆಗೆ ಅಂತ ಅದು ಪತ್ರಿಕೆಗಳಲ್ಲಿಯೂ ಬಂದಿದೆ. ಅದು ಎಲ್ಲರಿಗೂ ಗೊತ್ತಿದೆ. ಆ ಅಫಿಡವಿಟ್‌ನ್ನು ಕಾನ್ಸ್‌ಟೇಬಲ್‌ಕೊಟ್ಟಿದ್ದಾನೆ. ಈ ಸದನ 8ನೇ ತಾರೀಖಿಗೆ ಪ್ರಸಕ್ತ ಅಧಿವೇಶನ ಏಳುವ ಮೊದಲು, ಸಿಓಡಿಯವರ ತಾತ್ಕಾಲಿಕ ವರದಿಯನ್ನಾದರೂ ತಂದು, ಅದರ ಆಧಾರದ ಮೇಲೆ ಯಾವ ಕ್ರಮವನ್ನು ಯಾರ ಮೇಲೆ ತೆಗೆದುಕೊಳ್ಳಬೇಕೆಂದು ಪರಿಶೀಲನೆ ಮಾಡಿ ವರದಿಕೊಡುತ್ತೇನೆ ಎಂದು ನಿನ್ನೆ ನಾನು ಹೇಳಿದ್ದೇನೆ. ಹೀಗೆ ನಿನ್ನೆ ಸ್ಪಷ್ಟವಾಗಿ ಹೇಳಿದ್ದೇನೆ. ನನಗೆ ಪೂರ್ಣವಾಗಿ ನೆನಪಿದೆ. ನಾನು ಹೇಳಿದ ಯಾವ ಶಬ್ದಗಳು ಎಂಬುದನ್ನು ಕೂಡ ಬೇಕಾದರೆ ಹೇಳುತ್ತೇನೆ. ಅದೇ ವಾಕ್ಯಗಳನ್ನು ಬೇಕಾದರೂ ಪುನರುಚ್ಚಾರ

ಮಾಡುತ್ತೇನೆ. ಸದನ ಏಳುವುದರ ಮೊದಲು ವರದಿಯನ್ನು ತರಿಸಿಕೊಂಡು ಅದರ ಆಧಾರದ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಎಷ್ಟೇ ದೊಡ್ಡವರಿರಲಿ ಅಥವಾ ಕೆಳಗಿನವರೇ ಇರಲಿ, ನಾವು ನಿರ್ದಾಕ್ಷಿಣ್ಯವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಅದನ್ನು ಮುಂದುರಿಸಿ, ಇವೊತ್ತು ನಮಗೆ ಬಂದ ಮಾಹಿತಿಗಳ ಪ್ರಕಾರ ಅದು ಏನೇ ಇದ್ದರೂ ಕೂಡ ಅಫಿಡವಿಟ್ ಇರುವುದರಿಂದ, ಇದರಲ್ಲಿ ನಮಗೆ ಯಾವ ವಿಚಾರ ಉದ್ಭವವಾಗಿದೆ ಅಂದರೆ, ಆತನು ಆತ್ಮಹತ್ಯೆ ಮಾಡಕೊಂಡಿದ್ದಾನೆ ಎಂಬ ವರದಿ ಇರತಕ್ಕಂಥದ್ದು. ಅಟ್ರಾಸಿಟಿಯಿಂದ ದೌರ್ಜನ್ಯದಿಂದ ಅವನು ಸತ್ತಿದ್ದಾನೆ ಎಂಬುದಕ್ಕೆ ಕೂಡ ಅಫಿಡವಿಟ್‌ನಲ್ಲಿ ಏನೂ ಇಲ್ಲ. ಅಲ್ಲಿರುವ ಏಕೈಕ ವಿಚಾರ ಅಂದರೆ, ಅವನು ಮದುವೆ ದಿವಸ ಅಲ್ಲ, ಕೆಲವು ದಿವಸಗಳಿಂದ ಆತನು ಕಸ್ಟಡಿಯಲ್ಲಿದ್ದಾನೆ ಅಂದರೆ Wrongful detention ಆಗಿದ್ದಾನೆ ಎಂಬುದಕ್ಕೆ ಕಾನ್ಸ್‌ಟೇಬಲ್ ಅಫಿಡವಿಟ್ ಮುಖಾಂತರ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟರಿಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. Whatever be the merit of it... ನಾನು ಹೇಳುವುದೇನೆಂದರೆ ಅಧಿವೇಶನ ಮುಗಿಯುವುದರ ಮೊದಲು, ನಾನು ಸಿಓಡಿಯ ತಾತ್ಕಾಲಿಕ ವರದಿಯನ್ನಾದರೂ ಕೊಟ್ಟು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಆದರೆ, ಅಫಿಡವಿಟ್‌ನಲ್ಲಿ ರಾಂಗ್‌ಫುಲ್ ಕನ್‌ಫ್ಯಾನ್‌ಮೆಂಟ್ ಒಂದು ವಿಚಾರ ಇದ್ದುದರಿಂದ, ನಮಗೆ ಬಂದಂಥ ಮಾಹಿತಿಯ ಪ್ರಕಾರ ಮೊದಲನೇ ದಿವಸ ಮಾತ್ರ ಆತನನ್ನು ಸ್ಟೇಶನ್‌ಗೆ ಹಾಜರಿ ಮಾಡಿದ್ದಾರೆ ಎಂದು ಹೇಳಿ, ಇದು ಇರುವುದರಿಂದ ಏತನ್‌ಮಧ್ಯೆ since there was a prima facie case for wrongful detention, ಇದ್ದ ಕಾರಣ We have kept that station House Officer Chalapathy, Sub-Inspector under suspension until the further inquiry.

ಆ ಪೋಲೀಸ್ ಸ್ಟೇಶನ್‌ನಲ್ಲಿ ಯಾರು ಅಧಿಕಾರಿ ಇರುತ್ತಾರೋ, ಆತನ ಜವಾಬ್ದಾರಿ ಇರುತ್ತದೆ. ಅನೇಕ ಬಾರಿ ಪೋಲೀಸರು ಎಷ್ಟೇ ಒಳ್ಳೆಯ ಕೆಲಸ ಮಾಡಿದ್ದರೂ ಕೂಡ ಆ ಕಸ್ಟಡಿಡೆತ್‌ನಿಂದ ಬಹಳ ಕೆಟ್ಟ ಹೆಸರು ಅವರಿಗೆ ಬರುತ್ತಾ ಇದೆ. ಇವರು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಕೂಡ ಕೆಟ್ಟ ಹೆಸರು ಬರುತ್ತಾ ಇದೆ. ಕಸ್ಟಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರಬಹುದು. ಅಥವಾ ಯಾವಾದಾದರೂ ರೋಗದಿಂದ ಸತ್ತಿರಬಹುದು. ಬೇರೆ ಬೇರೆ ಕಾರಣಗಳಿಂದ ಸಾಯಬಹುದು. ಮನುಷ್ಯ ಪೋಲೀಸ್ ಸ್ಟೇಶನ್‌ನಲ್ಲಿ ಸಾಯಬಹುದು. ದಾರಿಯಲ್ಲಿ ಸಾಯಬಹುದು, ಮನೆಯಲ್ಲಿಯೂ ಸಾಯಬಹುದು. ಹೀಗೆ ಎಲ್ಲಾದರೂ ಸಾಯುತ್ತಾನೆ. ಆದರೆ ಪೋಲೀಸಲ್ ಕಸ್ಟಡಿಯಲ್ಲಿ ಸತ್ತರೆ ಹೀಗೆಲ್ಲಾ ಆಗುತ್ತದೆ. ಅದೇ ರೀತಿಯಲ್ಲಿ ಕೆಲವು ಸಾರಿ ನೆಗ್ಲಿಜೆನ್ಸ್ ಇರುತ್ತದೆ. There may not be culpable negligence.

ಒಂದು ಕ್ರಿಮಿನಲ್ ನೆಗ್ಲಿಜೆನ್ಸ್ ಅಂದರೆ, ಅಟ್ರಾಸಿಟಿ. ದೌರ್ಜನ್ಯದಿಂದ ಸಾಯದೆ, ಕೆಲವು ಸಾರಿ ಆತ್ಮಹತ್ಯೆ ಮಾಡಿಕೊಳ್ಳದ ಹಾಗೆ ಸಂಬಂಧಪಟ್ಟವರು ಸ್ವಲ್ಪ ನೋಡಿಕೊಳ್ಳುವ ಜವಾಬ್ದಾರಿಯು ಆ ಸ್ಟೇಷನ್ ಹೌಸ್ ಆಫೀಸರ್‌ಗೆ ಇದೆ. ಅದನ್ನು ಅವನು ನೋಡಬೇಕು. ಹಾಗೆ ಜವಾಬ್ದಾರಿಯಿಲ್ಲವಾದರೆ ಅದರಿಂದ ಇಡೀ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಕೆಟ್ಟ ಹೆಸರು ಬರುತ್ತದೆ. ಈ ಬಗ್ಗೆ ನಾವು 1991ರಿಂದ ಒಂದು ನಿರ್ಣಯವನ್ನು ಮಾಡಿದ್ದೇವೆ. ಅದೇನೆಂದರೆ, ಲಾಕಪ್ ಡೆತ್‌ನ ಯಾವ ಪ್ರಕರಣ ಬಂದರೂ ಕೂಡ ಅಂಥ ಪ್ರಕರಣಗಳನ್ನು ಸಿಓಡಿಗೆ ಕೊಡಬೇಕೆಂಬ ನಿರ್ಣಯವನ್ನು ನಾವು ಮಾಡಿದ್ದೇವೆ. ಇವೊತ್ತಿನಿಂದ ನಾನು ಏನು ಆಲೋಚನೆ ಮಾಡಿದ್ದೇನೆ ಅಂದರೆ, ಇಂಥ ಕೆಟ್ಟ ಹೆಸರು ಬರುವುದರ ಬಗ್ಗೆ ಪೋಲೀಸ್‌ನವರು ಸ್ವಲ್ಪ ಜಾಗೃತೆಯಿಂದ ಇರಬೇಕು. ಅವರು ಯಾವೊತ್ತು ಅಜಾಗರೂಕತೆಯಿಂದಿರಬಾರದು. Some sense of resposnsibility, some sense of integrity in performing their duties.

ಇದು ಬರತಕ್ಕಂಥಾದ್ದರ ಜೊತೆಯಲ್ಲಿ, in future wherever custody death occurs, may be by negligence, also where there is some prima facie evidence of negligence, I would like to keep the station house officer of the police

station under suspension. ಪೋಲೀಸ್ ಸ್ಟೇಶನ್ ಚಾರ್ಜ್ ಇದ್ದವರನ್ನು ಕೂಡಲೇ ಸಸ್ಪೆನ್ಷನ್‌ನಲ್ಲಿ ಇಡಬೇಕು. ಈ ಮೂಲಕ ಇಪ್ಪೊತ್ತಿನಿಂದ ಕೊನೇಪಕ್ಷ ಸಂಬಂಧಪಟ್ಟ ಅಧಿಕಾರಿಗೆ ಆ ಒಂದು ಹೆದರಿಕೆಯಾದರೂ ಇರುತ್ತದೆ. Wherever there is prime facie case of Negligence, we would like to keep that station house officer under suspension automatically. Let this message go all over Karnataka. ಇದರಿಂದ ಒಂದು ಪ್ರಯೋಗ ಮಾಡಿನೋಡೋಣ. ಇದರಿಂದ ಇನ್ನು ಮುಂದೆ ಬರತಕ್ಕಂಥ ದಿವಸಗಳಲ್ಲಾದರೂ ಕೂಡ ಹೆಚ್ಚು ಜಾಗೃತಿಯನ್ನು ಅವರು ವಹಿಸಬೇಕು ಮತ್ತು ಅವರು ಡಿಟೆನ್ಯೂ ಮೇಲೆ ಹೆಚ್ಚು ದೌರ್ಜನ್ಯ ಮಾಡತಕ್ಕಂಥ ಪ್ರವೃತ್ತಿಯೂ ಕೂಡ ಕಡಿಮೆಯಾಗುತ್ತವೆ. ಇಷ್ಟನ್ನು ನಾನು ಹೇಳಲಿಚ್ಚಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :- ನಾನು ಏನು ಹೇಳಿದ್ದೇನೆ ಅಂದರೆ ಈ ಕ್ರಮನ್ನು ವಿಟ್‌ನೆಸ್ ಮಾಡಿರತಕ್ಕಂಥವರು, ಗೋಪಾಲಕೃಷ್ಣ ಎನ್ನುವವರು ಅವರನ್ನು ನನ್ನ ಹತ್ತಿರ ಕರೆದುಕೊಂಡು ಬಂದಿದ್ದರು. ಅಲ್ಲಿರತಕ್ಕಂಥ ಆಫೀಸರ್ಸ್ ಅವರಿಗೆ ಪ್ರೊಟೆಕ್ಷನ್ ಕೊಡುವುದಿಲ್ಲ ಎಂಬ ಹೆದರಿಕೆ ಇದೆ. ಅದನ್ನೆಲ್ಲಾ ವಿಟ್‌ನೆಸ್ ಮಾಡಿದವರು, ನೋಡಿದವರು ಹೇಳುವುದಕ್ಕೆ ತಯಾರಾಗಿದ್ದಾರೆ, ನೀವು ಅವರಿಗೆ ರಕ್ಷಣೆಯ ಭರವಸೆ ಕೊಡುವುದಾದರೆ ಅವರು ಬಂದು ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ತಯಾರಾಗಿದ್ದಾರೆ ಎಂದು ನಾನು ಹೇಳುತ್ತಾ ಇದ್ದೇನೆ. ಇಷ್ಟು ಹೇಳಿದರೂ ಕೂಡ, ನೀವು ಅದರ ವರ್ಷನ್ ಮೇಲೆಯೇ ಡಿಫೆಂಡ್ ಅದರೆ ನಾವು ಏನು ಮಾಡುವುದಕ್ಕೆ ಸಾಧ್ಯವಾಗುತ್ತದ?

ಶ್ರೀ ಎಂ. ವೀರಪ್ಪ ಮೊಯಿಲಿ :- ಈಗ ತಾವುಗಳು ಹೇಳಿದ್ದೀರಿ. We have kept that Police station officer under suspenstion. ನಾವು ಇದನ್ನು ಸಿಓಡಿಗೆ ಕೊಡುತ್ತ ಇಲ್ಲ. ಸಿಬಿಐಗೆ ಕೊಡತಕ್ಕಂಥ ದೊಡ್ಡ ಕೆಲಸ ಇದಲ್ಲ. ನಾವು ಇದನ್ನು ಸಿಓಡಿಗೆ ಕೊಡುತ್ತಾ ಇದ್ದೇವೆ. ಸಿಬಿಐ ಜ್ಯುರಿಡಿಕ್ಷನ್‌ನಲ್ಲಿ ಅನೇಕ ಪೋಲೀಸ್ ಸ್ಟೇಶನ್‌ಗಳು ಬರುತ್ತವೆ.

ಶ್ರೀ ಆರ್. ವಿ. ದೇಶಪಾಂಡೆ :- ಆ ಸಿಬಿಐ ಥ್ರೆಟನ್ ಮಾಡಿದ ಎಂದು ಬಂದಿದೆ. ಬೆಟ್ಟೇಗೌಡ ಎಂಬ ಸಿಬಿಐ ಥ್ರೆಟನ್ ಮಾಡಿದ್ದಾನೆ ಎಂದು ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಹಾಗಲ್ಲ, ಎಸ್.ಸಿ.ಪಿ. ಕಮಿಷನರ್ ಆಫ್ ಪೋಲೀಸ್ ಎಲ್ಲಾ ಬಂದು ಬಿಡುತ್ತಾರೆ. He is a Police Station incharge officer ಸಿಬಿಐಗೆ ಅನೇಕ ಪೋಲೀಸ್ ಸ್ಟೇಶನ್‌ಗಳು ಇನ್‌ಚಾರ್ಜ್ ಇರುತ್ತದೆ. Directly vicarious liability ಇರುವಂಥಾದ್ದು ಆ ಸ್ಟೇಶನ್‌ಹೌಸ್ ಆಫೀಸರ್‌ನ ಮೇಲೆ. ಹಾಗೆಯೇ ಯಾವ ಜರ್ನಲಿಸ್ಟ್‌ಗೆ ಬೆದರಿಕೆ ಕೊಟ್ಟಂಥ ವಿಚಾರವನ್ನು ಕೂಡ ಸಿಓಡಿ ತನಿಖೆಯೊಳಗೆ ಸೇರ್ಪಡಿಸುತ್ತೇನೆ. ಆದ್ದರಿಂದ ಯಾವುದೇ ಹೆದರಿಕೆಯಿಲ್ಲದೆ ಯಾರಾದರೂ ವಿಟ್‌ನೆಸ್ ಕೊಡುವುದಾದರೆ, ಅವರು ಧೈರ್ಯವಾಗಿ ಮುಂದೆ ಬರಬಹುದು. ನಾವು ಅವರಿಗೆ ಎಲ್ಲಾ ರೀತಿಯ ಪ್ರೊಟೆಕ್ಷನ್ ಕೊಡುತ್ತೇನೆ.

ಪ್ರೊ ಎಂ. ಡಿ. ನಂಜುಂಡಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ವಿಚಾರಗಳನ್ನು ಹೇಳಿದ್ದಾರೆ. ಲಾಕ್‌ಅಪ್‌ಡೆತ್‌ನ ವಿಚಾರದಲ್ಲಿ ನಾವು ಅದಮೇಲೆ, ಆಟೋಮೆಟಿಕ್ ಆಗಿ ಜವಾಬ್ದಾರಿವುಳ್ಳ ಅಧಿಕಾರಿಯನ್ನು ಸಸ್ಪೆಂಡ್ ಮಾಡುತ್ತೇವೆ. ಎಂದು ಹೇಳಿದ್ದೀರಿ. ಇಲ್ಲಿ ಮಾತನಾಡುವಾಗ ಒಂದ ವಿಚಾರ ಬಂತು. 15 ದಿವಸಗಳ ಕಾಲ ಪೋಲೀಸ್ ಠಾಣೆಯಲ್ಲಿದ್ದ ಎಂದು ಒಂದು ವರದಿ ಇದೆ. 30 ದಿವಸಗಳ ಕಾಲ ಪೋಲೀಸ್ ಠಾಣೆಯಲ್ಲಿದ್ದ ಎಂಬ ಒಂದು ವರದಿ ಇದ್ದು, ಹೀಗೆ ಮಾತನಾಡಿದ್ದಾರೆ. ಈಗ ನಾನು ಲಾಕ್‌ಅಪ್‌ಡೆತ್‌ಗಳನ್ನು ಕಡಿಮೆ ಮಾಡುವಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ಸಲಹೆ ಮಾಡುತ್ತೇನೆ. ಇಲ್ಲಿ ಸತ್ತ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದು ಮುಖ್ಯವಲ್ಲ. ಲಾಕ್‌ಅಪ್‌ಡೆತ್ ಆಗಲೇ ಬಾರದು.

ಅದಕ್ಕೆ ಒಂದು ಸಣ್ಣ ಸಲಹೆ ಎಂದರೆ ನೀವು ಯಾರನ್ನೇ ದಸ್ತಗಿರಿ ಮಾಡುವಾಗಲೂ, ದಸ್ತಗಿರಿ ಮಾಡಿದ ತಾರೀಖು, ದಸ್ತಗಿರಿ ಮಾಡಿದ ಸಮಯ, ಇದನ್ನು ಬರವಣಿಗೆಯಲ್ಲಿ ಅವರ ಕೈಯಲ್ಲಿ ಕೊಡಬೇಕು. ಆತನು ತನಗೆ ಇಷ್ಟ ಬಂದವರ ಕೈಯಲ್ಲಿ ಆ ಚೀಟಿಯನ್ನು ಕೊಟ್ಟು ಪೋಲೀಸರ ಜೊತೆಯಲ್ಲಿ ಹೋಗಬಹುದು. ಇಂಥ ಒಂದು ಸಣ್ಣ ತಿದ್ದುಪಡಿಯನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗೆ ಮಾಡಬೇಕು. ಇದರಿಂದ ಲಾಕ್‌ಅಪ್‌ಡೆತ್ ಬಹಳ ಕಡಿಮೆಯಾಗುತ್ತದೆ. We do not know, when, and where he has been arrested and How long he has been kept in detenation. ಈ ಒಂದು ಸಣ್ಣ ತಿದ್ದುಪಡಿಯನ್ನು ಮಾಡಿ. ಮೇಲ್ವರ್ಗದವರಿಗೆ ಈ ಹಕ್ಕಗಳು ಈಗ ಇವೆ. ಪ್ರಿವೆಂಟಿವ್ ಡಿಟೆನ್‌ಶನ್‌ನಲ್ಲಿ, ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್‌ನಲ್ಲಿ, ಎಲ್ಲದರಲ್ಲೂ ಈ ಹಕ್ಕುಗಳು ನಮಗೆ ಇವೆ. ಮೇಲ್ಮಟ್ಟದಲ್ಲಿರುವ ನಮಗೆ ಆ ಹಕ್ಕುಗಳು ಇವೆ. ಆದರೆ ಸಾಮಾನ್ಯ ಮನುಷ್ಯರಿಗೂ ಆ ಕ್ರಿಮಿನಲ್ ಪ್ರೊಸೀಜರ್‌ಕೋಡ್ ಆ ಹಕ್ಕನ್ನು ಕೊಡಬೇಕಾಗಿದೆ ಅಷ್ಟೆ. ಇಷ್ಟು ಸಣ್ಣ ತಿದ್ದುಪಡಿ ತಂದು ಬಿಡಿ. ಯಾರನ್ನು ಬೇಕಾದರೂ ಅರೆಸ್ಟ್ ಮಾಡಿ ಆದರೆ ಯಾವಾಗ ಮತ್ತು ಯಾವ ಸಮಯದಲ್ಲಿ ಮಾಡಿದ್ದು ಎಂಬ ಬಗ್ಗೆ ಬರವಣಿಗೆಯಲ್ಲಿ ಆ ಮನುಷ್ಯನಿಗೆ ಕೊಡಿ. ಆತ ತನಗೆ ಇಷ್ಟ ಬಂದವರ ಕಡೆಗೆ ಅದನ್ನು ಕೊಟ್ಟು ಪೋಲೀಸರ ಜೊತೆಗೆ ಹೋಗುತ್ತಾನೆ. ಈ ಒಂದು ಸಣ್ಣ ತಿದ್ದುಪಡಿಯನ್ನು ದಯಮಾಡಿ ಮಾಡಿ. ಇದರಿಂದ ಲಾಕ್‌ಅಪ್‌ಡೆತ್ಸ್‌ನ್ನು ಎಷ್ಟು ಕಡಿಮೆಯಾಗುತ್ತದೆ ಎಂಬುದು ತಮಗೆ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ :-ಪ್ರೊಫೆಸರ್ ನಂಜುಂಡಸ್ವಾಮಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ :- ನಾನು ಇದನ್ನು ಯಾತಕ್ಕೆ ಹೇಳುತ್ತಿದ್ದೇನೆ ಅಂದರೆ, ಈ ಸದನದಲ್ಲಿ ನಾನು ಖಾಸಗಿ ಮಸೂದೆಯನ್ನು ಮಂಡಿಸಿದ್ದೆ. ನಿಮ್ಮ ಸರಕಾರದವರು ಇದನ್ನು ಪ್ರತಿಷ್ಠೆ ಮಾಡಿಕೊಂಡು ಧ್ವನಿಮತದಿಂದ ಬೀಳಿಸಿದರು. ತಾವುಗಳು ಇದನ್ನು ಅಧಿಕೃತವಾಗಿ ಹೊರಡಿಸಿದರೆ ನಾನೇ ಅದಕ್ಕೆ ಮೊದಲ ಮತವನ್ನು ಹಾಕುತ್ತೇನೆ.

ಆಶ್ರಯ ಯೋಜನೆಯಡಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ

ಶ್ರೀ ಬಿ. ಎಸ್. ಯಡಿಯೂರಪ್ಪ :-ಮಾನ್ಯ ಅಧ್ಯಕ್ಷರೇ, ತಾವು ಅಪ್ಪಣೆ ಕೊಡಿಸಿದ್ದೀರಿ, ಆಶ್ರಯ ಯೋಜನೆ ಬಗ್ಗೆ ಸಿಓಡಿ ಏನೊಂದು ಇಂಟ್ರೀಮ್ ರಿಪೋರ್ಟ್ ಕೊಟ್ಟಿದೆ, ಅದರ ಬಗ್ಗೆ ಟೇಬಲ್ ಮಾಡಬೇಕೆನ್ನುವಂಥಾದ್ದು ಮತ್ತು ಎರಡನೆಯದಾಗಿ ಪೂರ್ಣವಾಗಿ ಗೃಹಮಂಡಳಿಯ ಬಗ್ಗೆ ಮತ್ತು ಅಲ್ಲಿ ಆಗಿರುವಂಥ ಅವ್ಯವಹಾರಗಳ ಬಗ್ಗೆ, ಸಿಓಡಿ ತನಿಖೆ ಮಾಡಿಸ ಬೇಕೆನ್ನುವಂಥಾದ್ದು ನನ್ನ ವಾದ ಇದ್ದು ಅದಕ್ಕೆ ಪೂರಕವಾಗಿ ಅನೇಕ ದಾಖಲೆಗಳನ್ನು ಕೊಟ್ಟಿದ್ದೇನೆ. ನನ್ನ ಹತ್ತಿರ ದಾಖಲೆಗಳು ಮತ್ತು ವಿವರಗಳು ಇವೆ. ಅದಕ್ಕೋಸ್ಕರವಾಗಿ ಮುಖ್ಯಮಂತ್ರಿಗಳು ಬಂದ ಮೇಲೆ ಅವರಲ್ಲಿ ಸಿಓಡಿ ಇಂಟ್ರೀಮ್ ರಿಪೋರ್ಟ್ ಇದ್ದರೆ ಅದನ್ನು ಸದನದ ಮುಂದಿಡುವ ಏರ್ಪಾಡು ಮಾಡುತ್ತೇನೆ ಎಂದು ಹೇಳಿದ್ದೀರಿ. ಆದ್ದರಿಂದ ಇಂಥ ಗಂಭೀರವಾದ ವಿಚಾರದ ಬಗ್ಗೆ ಅವರಿಗೆ ಸಿಓಡಿ ಇಂಟ್ರೀಮ್ ರಿಪೋರ್ಟ್ ಬಂದಿದೆಯೋ ಅಥವಾ ಇಲ್ಲವೊ? ಅದನ್ನು ಇಲ್ಲಿ ಇಡಲು ಅವರಿಗೆ ತೊಂದರೆ ಏನಿದೆ ಎಂಬುದನ್ನು ಹೇಳಬೇಕು. ಅದನ್ನು ಟೇಬಲ್ ಮಾಡುವುದಕ್ಕೆ ತೊಂದರೆ ಏನಿದೆ? ಅದರಲ್ಲಿ ಯಾರು ಯಾರ ಮೇಲೆ ಆರೋಪ ಇದೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಎಂಟೈರ್ ಗೃಹಮಂಡಳಿಯ ವ್ಯವಹಾರದ ಬಗ್ಗೆ ತಾವು ಸಿ.ಓ.ಡಿ. ಯಿಂದ ತನಿಖೆಯನ್ನು ಮಾಡಿಸಬೇಕೆಂದು ನಾನು ನಿನ್ನೆಯಿಂದ ಹೇಳುತ್ತಿದ್ದೇನೆ. ಸುಮಾರು 20 ಕೋಟಿ ರೂಪಾಯಿಯ ಅವ್ಯವಹಾರ ಮನೆ ಕಟ್ಟುವುದರ ಬಗ್ಗೆ ಆಗಿದೆ. ಕಟ್ಟುವಂತಹ ದುಡ್ಡನ್ನು ಬೇರೆ ಯಾರಿಗೂ ಕಂಟ್ರಾಕ್ಟದಾರರಿಗೆ ಕೊಟ್ಟು, ಇದನ್ನು ಮಾಡಿದ್ದರೆ, ಇನ್ನೂ ಉಳಿದಂಥದ್ದು ಸುಮಾರು 100 ಕೋಟಿ ರೂಪಾಯಿಗಳ ಅವ್ಯವಹಾರಗಳು ನಡೆದಿದೆ. ಎಂಟೈರ್